ರಾಜ್ಯ ಒಕ್ಕಲಿಗರ ಸಂಘದ ಕೊಡುಗೆ



# ಒಕ್ಕಲಿಗರ ಪತ್ರಿಕೆ



ಸಂಪುಟ–15 । ಸಂಚಿಕೆ–6 । ಜನವರಿ 2024

VOLUME 15 | ISSUE 5 | KARKAN/2010/37125

BANGALORE | JANUARY 2024 | PRICE: Rs. 10/-

## ವಿಶ್ವೇಶ್ವರಪುರ ವಿಜ್ಞಾನ ಕಾಲೇಜು

ಒಕ್ಕಲಿಗರ ಸಂಘ
ಕೆ.ಆರ್.ರೋಡು , ಬೆಂಗಳೂರು-೪



15-1-1980 ರಂದು ಮಹಾಕವಿ **ಕುವೆಂಪು** ಅವರು
ವಿಶ್ವೇಶ್ವರಪುರ ವಿಜ್ಞಾನ ಕಾಲೇಜಿನ ನೂತನ ಕಟ್ಟಡದ ಪ್ರವೇಶೋತ್ಸವವನ್ನು ನೆರವೇರಿಸಿದರು

| ಪ್ರೊ॥ ಹೆಚ್.ಎನ್.ರಾಮಕೃಷ್ಣ | ಶ್ರೀ॥ ಗುತ್ತಲಗೌಡ | ಡಾ॥ ಎಂ.ಹೆಚ್.ಮರೀಗೌಡ |
|---|---|---|
| ಪ್ರಾಚಾರ್ಯರು | ಪ್ರಧಾನಕಾರ್ಯದರ್ಶಿಗಳು | ಅಧ್ಯಕ್ಷರು |



"ಸರ್ವರಿಗೆ ಸಮಬಾಳು! ಸರ್ವರಿಗೆ ಸಮಪಾಲು!"
ಎಂಬ ನವಯುಗವಾಣಿ ಘೋಷಿಸಿದೆ ಕೇಳಿ!
ಯುಗಯುಗದ ದಾರಿದ್ರಭಾರದಿಂ ಬೆನ್‌ಬಾಗಿ
ಗೋಳಿಡುವ ಬಡಜನರೆ, ಏಳಿರೈ ಏಳಿ!
ಶ್ರೀಮಂತರಡಿಗಳಡಿ ಹುಡಿಯಲ್ಲಿ ಹೊರಳಾಡಿ
ಕುಸಿದು ಕುಗ್ಗಿದರೆಲ್ಲ ಸಂತಸವ ತಾಳಿ!
ಕಂಗೆಟ್ಟ ಸೋದರರೆ, ಬರುತಿಹಳು ಕಾಣಿರೈ
ದಾನವರ ಸೀಳಿ ಅದೊ ವಿಪ್ಲವದ ಕಾಳಿ!

— ಕುವೆಂಪು

## ಕಲಿಯುವವರ ಕಲ್ಪವೃಕ್ಷ
## ವಿ.ವಿ ಪುರ ಸಂಜೆ ಕಾಲೇಜು



## ಕೆಂಪೇಗೌಡ ಶುಶ್ರೂಷ ಸಂಸ್ಥೆ




## ವಿಶ್ವೇಶ್ವರಪುರ ಕಲಾ ಮತ್ತು ವಾಣಿಜ್ಯ ಹಗಲು ಕಾಲೇಜು



# ಒಕ್ಕಲಿಗರ ಪತ್ರಿಕೆ

ಸಂಪುಟ-15 । ಸಂಚಿಕೆ-6 । ಜನವರಿ 2024

ಪ್ರಧಾನ ಸಂಪಾದಕರು

ಶ್ರೀ ಡಿ. ಹನುಮಂತಯ್ಯ

ಅಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ

ಸಂಪಾದಕೀಯ ಮಂಡಳಿ

ಶ್ರೀ ಬಿ. ಕೆಂಚಪ್ಪಗೌಡರು

ಶ್ರೀ ಎಲ್. ಶ್ರೀನಿವಾಸ್

ಶ್ರೀ ಸಿ. ದೇವರಾಜು (ಹಾಪ್‌ಕಾಮ್ಸ್)

ಶ್ರೀ ಹೆಚ್.ಸಿ. ಜಯಮುತ್ತು

ಶ್ರೀ ವೆಂಕಟರಾಮೇಗೌಡ

ಶ್ರೀ ಸಿ.ಎಂ. ಮಾರೇಗೌಡ

ಶ್ರೀ ಎಲುವಳ್ಳಿ ಎನ್. ರಮೇಶ್

ಶ್ರೀ ಬಿ.ಪಿ. ಮಂಜೇಗೌಡ

ಶ್ರೀ ಬಿ.ವಿ. ರಾಜಶೇಖರ ಗೌಡ

ಸಂಪಾದಕರು

ಶ್ರೀ ಆನಂದ್ ಕುಮಾರ್ ಎಸ್.

ಸಹಕಾರ

ಪ್ರೊ. ಬೊಮ್ಮೇಗೌಡ

ಸಹಾಯಕ ಪ್ರಾಧ್ಯಾಪಕರು

ವಿ.ವಿ.ಪುರಂ ಕಲೆ ಮತ್ತು ವಾಣಿಜ್ಯ ಕಾಲೇಜು

ವಿನ್ಯಾಸ

ಪ್ರಶಾಂತ್

ತಾಂತ್ರಿಕ ಸಹಾಯ

ಸಚಿನ್ ವಿ.ಎ.



ಕಛೇರಿ ವಿಳಾಸ

ಒಕ್ಕಲಿಗರ ಪತ್ರಿಕೆ

ನಾಡಪ್ರಭು ಕೆಂಪೇಗೌಡ ಭವನ

ಒಕ್ಕಲಿಗರ ಸಂಘ

ಕೆ. ಆರ್. ರಸ್ತೆ

ಬೆಂಗಳೂರು-04

rvsmediacell@gmail.com


## ಸಂಪಾದಕೀಯ



### "ನಾಡಿನ ಸಮಸ್ತರಿಗೆ ಗಣರಾಜ್ಯೋತ್ಸವದ ಶುಭಾಶಯಗಳು"

ಈ ಸಂಚಿಕೆಯಲ್ಲಿ ನಮ್ಮ ಸಂಘದ ಹೆಮ್ಮೆಯ ಮತ್ತು ಪ್ರಥಮ ಶಿಕ್ಷಣ ಸಂಸ್ಥೆಗಳಾದ ವಿ.ವಿ.ಪುರ ವಿಜ್ಞಾನ ಕಾಲೇಜು, ವಿ.ವಿ.ಪುರ ಕಲಾ ಮತ್ತು ವಾಣಿಜ್ಯ ಹಗಲು ಕಾಲೇಜು, ವಿ.ವಿ.ಪುರ ಕಲಾ ಮತ್ತು ವಾಣಿಜ್ಯ ಸಂಜೆ ಕಾಲೇಜು, ಹಾಗೂ ಕೆಂಪೇಗೌಡ ಶುಶ್ರೂಷ ವಿದ್ಯಾಲಯಗಳ ಕಿರು ಪರಿಚಯವಿರುತ್ತದೆ.

ರಾಜ್ಯ ಒಕ್ಕಲಿಗರ ಸಂಘದ ಆಶ್ರಯದಲ್ಲಿ ನಡೆಯುವ ಅನೇಕ ವಿದ್ಯಾಸಂಸ್ಥೆಗಳಲ್ಲಿ ವಿಶ್ವೇಶ್ವರಪುರ ವಿಜ್ಞಾನ ಕಾಲೇಜು ಒಂದು. ವಿಜ್ಞಾನ ಕಾಲೇಜು ಸ್ಥಾಪನೆಯಾದದ್ದು 1966ರಲ್ಲಿ. ಪ್ರಾರಂಭದಲ್ಲಿ ಕಲೆ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜುಗಳು ಒಟ್ಟಿಗೆ ಇತ್ತು. 1980ರಲ್ಲಿ ವಿಜ್ಞಾನ ಕಾಲೇಜು ಕಲೆ ಮತ್ತು ವಾಣಿಜ್ಯ ಕಾಲೇಜುಗಳಿಂದ ಬೇರ್ಪಟ್ಟು ತನ್ನದೇ ಆದ ಸ್ವಂತ, ಸುಸಜ್ಜಿತ ಕಟ್ಟಡವನ್ನು ಹೊಂದಿತು. ರಾಷ್ಟ್ರಕವಿ ಶ್ರೀ ಕುವೆಂಪುರವರಿಂದ ಉದ್ಘಾಟಿಸಲ್ಪಟ್ಟ ಈ ಕಾಲೇಜು ಬೆಂಗಳೂರಿನ ಅಪ್ಪಟ ವಿಜ್ಞಾನ ಕಾಲೇಜುಗಳಲ್ಲಿ ಒಂದು ಎಂಬ ಹೆಮ್ಮೆಗೆ ಪಾತ್ರವಾಗಿದೆ. ಹಳ್ಳಿಗಾಡಿನಿಂದ ಬರುವ ರೈತಾಪಿವರ್ಗ ವಿದ್ಯಾರ್ಥಿಗಳಿಗೆ ಉನ್ನತ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶವನ್ನು ಗುರಿಯಾಗಿಸಿಕೊಂಡು ಅತ್ಯಂತ ಕಡಿಮೆ ವೆಚ್ಚದಲ್ಲಿ ತಮ್ಮ ವಿದ್ಯಾಭ್ಯಾಸ ಪೂರೈಸಲು ಅವಕಾಶ ಕಲ್ಪಿಸಿದೆ.

'ಬಾಯಾರಿಕೆಯನ್ನು ನೀಗಿಸುವವು ಸಣ್ಣ ಪುಟ್ಟ ಸಿಹಿನೀರಿನ ಒರತೆಗಳೇ ಹೊರತು ಉಪ್ಪು ನೀರಿನ ದೊಡ್ಡ ದೊಡ್ಡ ಸಮುದ್ರಗಳಲ್ಲ' ಎಂಬುದೊಂದು ಮಾತಿದೆ. ಸಣ್ಣ ಪುಟ್ಟ ಒರತೆಗಳೇ ಬಾಯಾರಿಕೆಯನ್ನು ನೀಗಿಸುವಾಗ ಆ ಒರತೆಗಳು ಸರೋವರಗಳಾದರೆ ಇನ್ನೆಷ್ಟು ದಾಹವನ್ನು ಹಿಂಗಿಸಬಹುದು. ಈ ಮಾತಿಗೆ ಪೂರಕವಾದ ಉದಾಹರಣೆಯೆಂದರೆ ರಾಜ್ಯ ಒಕ್ಕಲಿಗರ ಸಂಘವು ನಡೆಸುತ್ತಿರುವ ವಿದ್ಯಾ ಸಂಸ್ಥೆಗಳು. 1906 ರಲ್ಲಿ ತಲೆಯೆತ್ತಿದ ಶಿಕ್ಷಣ ಪ್ರಸಾರವನ್ನೇ ಪ್ರಧಾನ ಗುರಿಯನ್ನಾಗಿಸಿಕೊಂಡು ರಾಜ್ಯ ಒಕ್ಕಲಿಗರ ಸಂಘವು 1966ರಲ್ಲಿ ವಿಶ್ವೇಶ್ವರಪುರ ಕಲೆ ಮತ್ತು ವಾಣಿಜ್ಯ ಪದವಿ ಮತ್ತು ಪದವಿ ಪೂರ್ವ ಸಂಜೆ ಕಾಲೇಜನ್ನು ಆರಂಭಿಸಿತು.

ಕನ್ನಡ ನಾಡು ಕಂಡ ಶ್ರೇಷ್ಠ ಆಡಳಿತಗಾರರಲ್ಲಿ ಒಬ್ಬರೂ ಕೃಷ್ಣ ರಾಜಸಾಗರ ಬೃಂದಾವನದ ನಿರ್ಮಾತುಗಳೂ, ಪರಿಸರ ಪ್ರೇಮಿಗಳೂ, ದಕ್ಷತೆ ಮತ್ತು ಪ್ರಾಮಾಣಿಕತೆ ಹಾಗೂ ದೂರದರ್ಶಿತ್ವಕ್ಕೆ ಹೆಸರಾಗಿದ್ದ ದಿವಾನ್ ಮಿರ್ಜಾ ಇಸ್ಮಾಯಿಲ್ ರವರು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಬಸವನಗುಡಿ ನ್ಯಾಷನಲ್ ಕಾಲೇಜುಗಳ ಮಧ್ಯದಲ್ಲಿ ವಿಶ್ವೇಶ್ವರಪುರ ವಿಜ್ಞಾನ, ಕಲೆ ಹಾಗೂ ವಾಣಿಜ್ಯ ಕಾಲೇಜಿಗೆ ಅಡಿಗಲ್ಲು ಹಾಕಿ ಶಂಕುಸ್ಥಾಪನೆ ನೆರವೇರಿಸಿದ್ದು ರಾಜ್ಯ ಒಕ್ಕಲಿಗರ ಸಂಘದ ಇತಿಹಾಸದ ಪುಟಗಳ ಮಧುರಕ್ಷಣ, ಬಹುಮುಖ್ಯವಾಗಿ ನಗರ ಪ್ರದೇಶಗಳನ್ನಷ್ಟೇ ಗಮನದಲ್ಲಿಟ್ಟುಕೊಳ್ಳದೆ, ಆಗಿನ ಸಮಯದ ಬೆಂಗಳೂರಿನ ಸುತ್ತಮುತ್ತಲ ಹಳ್ಳಿಯ ಬಡ, ಮಧ್ಯಮ ಹಾಗೂ ಸಾಮಾಜಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಹೆಚ್ಚಿನ ಗಮನ ನೀಡಿ 1966ರಲ್ಲಿ ಪ್ರಾರಂಭವಾದ ಕಾಲೇಜು, ದಿನಕಳೆದಂತೆ ನಗರ ಮತ್ತು ಹಳ್ಳಿಗಳ ಬಡ ಹಾಗೂ ಮಧ್ಯಮ ವರ್ಗದ ಜನರ ಪಾಲಿಗೆ ಕಾಮದೇನು ಕಲ್ಪವೃಕ್ಷವಾದುದು ಉತ್ಪ್ರೇಕ್ಷೆಯ ಮಾತೇನಲ್ಲ.

ಕೆಂಪೇಗೌಡ ಶುಶ್ರೂಷ ವಿದ್ಯಾಲಯವು 1990ರಲ್ಲಿ 40 ವಿದ್ಯಾರ್ಥಿಗಳ ಪ್ರವೇಶಗಳೊಂದಿಗೆ ಕರ್ನಾಟಕ ನರ್ಸಿಂಗ್ ಕೌನ್ಸಿಲ್ ಮತ್ತು ಇಂಡಿಯನ್ ನರ್ಸಿಂಗ್ ಕೌನ್ಸಿಲ್ ಅನುಮೋದನೆಯೊಂದಿಗೆ ಕೆಂಪೇಗೌಡ ಆಸ್ಪತ್ರೆಯ ಐದನೇ ಮಹಡಿಯಲ್ಲಿ ಜನರಲ್ ನರ್ಸಿಂಗ್ ಮತ್ತು ಮಿಡ್‌ವೈಫರಿ ಕೋರ್ಸಿನೊಂದಿಗೆ ಪ್ರಾರಂಭಿಸಲ್ಪಟ್ಟಿತ್ತು. ಪ್ರಥಮ ವರ್ಷದಲ್ಲಿಯೇ ನೂರಕ್ಕೆ ನೂರರಷ್ಟು ಪ್ರಥಮ ಶ್ರೇಣಿಯಲ್ಲಿ ಪರೀಕ್ಷಾ ಫಲಿತಾಂಶವನ್ನು ಸಾಧಿಸಲಾಯಿತು. ಕ್ರಮೇಣ 40 ವಿದ್ಯಾರ್ಥಿಗಳಿಂದ 60 ವಿದ್ಯಾರ್ಥಿಗಳಿಗೆ ಪ್ರವೇಶಗಳನ್ನು ಮಾಡಿಕೊಳ್ಳಲು ಸಂಬಂಧಪಟ್ಟ ಕೌನ್ಸಿಲ್‌ಗಳಿಂದ ಅನುಮತಿಯನ್ನು ಪಡೆಯಲಾಯಿತು. ಈ ವಿದ್ಯಾಲಯಕ್ಕೆ ಪ್ರಥಮದಲ್ಲಿ ಆಡಳಿತ ಮಂಡಳಿ ಅಧ್ಯಕ್ಷರಾಗಿ ಶ್ರೀಮತಿ. ವಾಸಂತಿ ಶಿವಣ್ಣ ನವರು ನೇಮಕವಾಗಿ ವಿದ್ಯಾಲಯದ ಅಭಿವೃದ್ಧಿಗಾಗಿ ಶ್ರಮಿಸಿದರು. ಪ್ರವೇಶಗಳಲ್ಲಿ ಅರ್ಧ ಭಾಗದಷ್ಟು ಒಕ್ಕಲಿಗರ ಜನಾಂಗಕ್ಕೆ ಮೀಸಲಿಟ್ಟು ಅವರಿಂದ ಕೇವಲ ಫೀ ಶುಲ್ಕಗಳನ್ನು ಮಾತ್ರ ಕಟ್ಟಿಸಿಕೊಳ್ಳಲಾಯಿತು. ಈ ರೀತಿಯಾಗಿ ಮುಂದುವರೆದು ಇಂದು ಪ್ರವೇಶಾತಿಯ ಸಂಖ್ಯೆ 100 ಕ್ಕೆ ಮಿತಿಗೊಳಿಸಿ ವಿದ್ಯಾಲಯವನ್ನು ಮುಂದುವರೆಸಲಾಗುತ್ತಿದೆ.

**ಶ್ರೀ ಡಿ. ಹನುಮಂತಯ್ಯ**

ಪ್ರಧಾನ ಸಂಪಾದಕರು

# ಕೆಂಪೇಗೌಡ ಶುಶ್ರೂಷ ಸಂಸ್ಥೆ

K.R. Road, Bengaluru - 560 004

## ಕೆಂಪೇಗೌಡ ಶುಶ್ರೂಷ ವಿದ್ಯಾಲಯ ಮತ್ತು ಶುಶ್ರೂಷ ಮಹಾವಿದ್ಯಾಲಯದ ಅಭಿವೃದ್ಧಿ ಮತ್ತು ಪ್ರಗತಿಯ ಬಗ್ಗೆ ಕಿರುನೋಟ



**ಶ್ರೀ ಎಸ್.ಜೆ. ಅಶೋಕ್ ಜಯರಾಂ**
**ಅಧ್ಯಕ್ಷರು,** ಕೊಳ್ಳುವ ಸಮಿತಿ,
ಕೆ.ಐ.ಎನ್. ಆರ್.ವಿ.ಸ್.ಸಿ.ನ್. ಮತ್ತು ಕೆ.ಹೆಚ್. ಆಸ್ಪತ್ರೆ

ಕೆಂಪೇಗೌಡ ಶುಶ್ರೂಷ ವಿದ್ಯಾಲಯವು 1990ರಲ್ಲಿ 40 ವಿದ್ಯಾರ್ಥಿಗಳ ಪ್ರವೇಶಗಳೊಂದಿಗೆ ಕರ್ನಾಟಕ ನರ್ಸಿಂಗ್ ಕೌನ್ಸಿಲ್ ಮತ್ತು ಇಂಡಿಯನ್ ನರ್ಸಿಂಗ್ ಕೌನ್ಸಿಲ್ ಅನುಮೋದನೆಯೊಂದಿಗೆ ಕೆಂಪೇಗೌಡ ಆಸ್ಪತ್ರೆಯ ಐದನೇ ಮಹಡಿಯಲ್ಲಿ ಜನರಲ್ ನರ್ಸಿಂಗ್ ಮತ್ತು ಮಿಡ್‌ವೈಫರಿ ಕೋರ್ಸಿನೊಂದಿಗೆ ಪ್ರಾರಂಭಿಸಲ್ಪಟ್ಟಿತ್ತು. ಪ್ರಥಮ ವರ್ಷದಲ್ಲಿಯೇ ನೂರಕ್ಕೆ ನೂರರಷ್ಟು ಪ್ರಥಮ ಶ್ರೇಣಿಯಲ್ಲಿ ಪರೀಕ್ಷಾ ಫಲಿತಾಂಶವನ್ನು ಸಾಧಿಸಲಾಯಿತು. ಕ್ರಮೇಣ 40 ವಿದ್ಯಾರ್ಥಿಗಳಿಂದ 60 ವಿದ್ಯಾರ್ಥಿಗಳಿಗೆ ಪ್ರವೇಶಗಳನ್ನು ಮಾಡಿಕೊಳ್ಳಲು ಸಂಬಂಧಪಟ್ಟ ಕೌನ್ಸಿಲ್‌ಗಳಿಂದ ಅನುಮತಿಯನ್ನು ಪಡೆಯಲಾಯಿತು. ಈ ವಿದ್ಯಾಲಯಕ್ಕೆ ಪ್ರಥಮವಾಗಿ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಶ್ರೀಮತಿ. ವಾಸಂತಿ ಶಿವಣ್ಣ ನವರು ನೇಮಕವಾಗಿ ವಿದ್ಯಾಲಯದ ಅಭಿವೃದ್ಧಿಗಾಗಿ ಶ್ರಮಿಸಿದರು. ಪ್ರವೇಶಗಳಲ್ಲಿ ಅರ್ಧ ಭಾಗದಷ್ಟು ಒಕ್ಕಲಿಗರ ಜನಾಂಗಕ್ಕೆ ಮೀಸಲಿಟ್ಟು ಅವರಿಂದ ಕೇವಲ ಫೀ ಶುಲ್ಕಗಳನ್ನು ಮಾತ್ರ ಕಟ್ಟಿಸಿಕೊಳ್ಳಲಾಯಿತು. ಈ ರೀತಿಯಾಗಿ ಮುಂದುವರೆದು ಇಂದು ಪ್ರವೇಶಗಳ ಸಂಖ್ಯೆ ಗರಿಷ್ಠ 100ಕ್ಕೆ ಏರಿಸಿ ವಿದ್ಯಾಲಯವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯಲಾಗಿದೆ.

ಶ್ರೀಮತಿ ವಾಸಂತಿ ಶಿವಣ್ಣ, ಶ್ರೀಮತಿ. ಲೇಟ್ ಎಲ್. ಲಕ್ಷ್ಮಿದೇವಮ್ಮ, ಶ್ರೀ.ನಾರಾಯಣಸ್ವಾಮಿ, ಡಾ॥ ಕೆ.ಪಿ.ಶ್ರೀನಿವಾಸ ಮೂರ್ತಿ, ಶ್ರೀ.ಲೇಟ್ ಎನ್.ಶಿವರಾಂ, ಶ್ರೀ.ಪಿ.ವೆಂಕಟೇಶ್, ಶ್ರೀ.ಪುಟ್ಟಣ್ಣ,




ಶ್ರೀ.ಡಿ.ಸಿ.ಕೆ.ಕಾಳೇಗೌಡ, ಶ್ರೀ.ಎಚ್.ಎಲ್.ಶಿವಣ್ಣ ಮತ್ತು ಶ್ರೀ ಬಿ.ಆರ್.ವಾಸುದೇವ್, ಶ್ರೀ ಕೆ.ಕೃಷ್ಣಮೂರ್ತಿ, ಶ್ರೀ.ಶಿವಣ್ಣ, ಶ್ರೀ.ಸತೀಶ್, ಶ್ರೀ.ಮಂಜೇಗೌಡ.ಎಂ.ಬಿ, ರವರು ಸಂಸ್ಥೆಯ ಸರ್ವತೋಮುಖ ಏಳಿಗೆಗೆ ಕಾರಣರಾಗಿದ್ದಾರೆ. ಪ್ರಸಕ್ತ ಸಾಲಿನಲ್ಲಿ ಶ್ರೀ.ಅಶೋಕ್ ಎಸ್.ಡಿ ಜಯರಾಮ್ ರವರು ಕ್ರಿಯಾತ್ಮಕವಾಗಿ ಸಂಸ್ಥೆಯ ಆಡಳಿತ ಕಾರ್ಯವನ್ನು ಮುನ್ನಡೆಸುತ್ತಿದ್ದಾರೆ.

ಬಿ.ಎಸ್ಸಿ (ನರ್ಸಿಂಗ್) ಕೋರ್ಸಿನೊಂದಿಗೆ ಕೆಂಪೇಗೌಡ ಶುಶ್ರೂಷ ಮಹಾವಿದ್ಯಾಲಯವು 2001 ರಲ್ಲಿ ಪ್ರಾರಂಭಿಸಲಾಯಿತು. ಪ್ರಾರಂಭದಲ್ಲಿ ಕೇವಲ 30 ವಿದ್ಯಾರ್ಥಿಗಳ ಪ್ರವೇಶಗಳಿಗೆ ಮಾತ್ರ ಕೌನ್ಸಿಲ್‌ಗಳಿಂದ ಅನುಮೋದನೆ ಸಿಕ್ಕಿತು. ಪುನಃ ಮುಂದೆ 60 ವಿದ್ಯಾರ್ಥಿಗಳಿಗೆ ಪ್ರವೇಶಗಳನ್ನು ಮಾಡಿಕೊಳ್ಳಲು ಅನುಮತಿಯನ್ನು ಪಡೆಯಲಾಯಿತು. 2017ರಲ್ಲಿ ಬಿ.ಎಸ್.ಸಿ. ಸೀಟುಗಳನ್ನು 60 ರಿಂದ 100ಕ್ಕೆ ಏರಿಸಲಾಯಿತು.

2006 ರ ಅಕ್ಟೋಬರ್ ತಿಂಗಳಲ್ಲಿ ಹಳೆಯ ಕಾನೂನು ಕಾಲೇಜಿಗೆ ಹಳೆಯ ವಿದ್ಯಾಲಯದಿಂದ ಬದಲಾಯಿಸಿಕೊಳ್ಳಲಾಯಿತು. ಹಳೆಯ ವಿದ್ಯಾಲಯದ ಎಲ್ಲಾ ಕೊಠಡಿಗಳನ್ನು ವಿದ್ಯಾರ್ಥಿನಿಲಯಕ್ಕೆ ಬಿಟ್ಟುಕೊಡಲಾಯಿತು. ಹಳೆಯ ವಿದ್ಯಾರ್ಥಿನಿ ನಿಲಯದ ಕಟ್ಟಡವನ್ನು ಕೆಡವಿದ್ದು, ಸುಸಜ್ಜಿತ ವಿದ್ಯಾರ್ಥಿನಿ ನಿಲಯ ಕಟ್ಟಡವನ್ನು ನಿರ್ಮಾಣ ಮಾಡಲು ಈಗಿನ ಆಡಳಿತ ಮಂಡಳಿ ತೀರ್ಮಾನ ಕೈಗೊಂಡಿರುತ್ತದೆ.

2008 ರಲ್ಲಿ ಎಂ.ಎಸ್ಸಿ(ನರ್ಸಿಂಗ್) ಕೋರ್ಸನ್ನು ಎರಡು ವಿಷಯಗಳಲ್ಲಿ ಪ್ರಾರಂಭಿಸಿ 2010ರಿಂದ ಪ್ರಸ್ತುತ 5 ವಿಷಯಗಳಲ್ಲಿ ಪ್ರವೇಶವನ್ನು ನೀಡಲಾಗುತ್ತಿದೆ. ನಮ್ಮ ವಿದ್ಯಾಲಯದಲ್ಲಿ ಸುಸಜ್ಜಿತವಾದ ಪ್ರಯೋಗಾಲಯಗಳು ಗ್ರಂಥಾಲಯ, ಡಿಜಿಟಲ್ ಗ್ರಂಥಾಲಯಗಳು ಲಭ್ಯವಿದ್ದು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಅನುಕೂಲವಾಗುತ್ತಿದೆ. 2010–11 ರಲ್ಲಿ ಪಿ.ಬಿ.ಬಿ.ಎಸ್ಸಿ ಕೋರ್ಸ್ ಪ್ರಾರಂಭಗೊಂಡಿದ್ದು.

ರಾಜ್ಯದ ನೂರಾರು ನರ್ಸಿಂಗ್ ಕಾಲೇಜುಗಳಲ್ಲಿ ಕೇವಲ ಏಳು ಕಾಲೇಜುಗಳಿಗೆ ಮಾತ್ರ ಗುಣಮಟ್ಟದ ಶಿಕ್ಷಣದ ಆದ್ಯತೆ ಮೇರೆಗೆ 'ನರ್ಸ್ ಪ್ರಾಕ್ಟೀಷನರ್ ಇನ್ ಕ್ರಿಟಿಕಲ್ ಕೇರ್' (ಎನ.ಪಿ.ಸಿ.ಸಿ.) ಕೋರ್ಸ್‌ಗೆ 2019ರಲ್ಲಿ ಅನುಮತಿ ಸಿಕ್ಕಿದ್ದು ನಮ್ಮ ಸಂಸ್ಥೆಗೆ ಹೆಮ್ಮೆಯ ವಿಷಯವಾಗಿದೆ.

ನಮ್ಮ ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಕೇವಲ ಪಾಠಪ್ರವಚನಗಳಲ್ಲದೇ ಪಠ್ಯೇತರ ಚಟುವಟಿಕೆಗಳಾದ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮತ್ತು ಪ್ರೋತ್ಸಾಹ ನೀಡಿ ಅಂತರ ವಿಶ್ವವಿದ್ಯಾಲಯ, ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿಗಳನ್ನು ಪಡೆದಿರುತ್ತಾರೆ.

ನಮ್ಮ ವಿದ್ಯಾರ್ಥಿಗಳಿಗೆ ಶುಶ್ರೂಷ ತರಬೇತಿಗೆ ಅವಶ್ಯವಿರುವ ಕ್ಲಿನಿಕಲ್ ಸೌಲಭ್ಯವನ್ನು ಕೆಂಪೇಗೌಡ ಆಸ್ಪತ್ರೆಯಲ್ಲಿ ನೀಡುತ್ತಿದ್ದು ಉಳಿದೆಲ್ಲಾ







ವಿದ್ಯಾಲಯಗಳಿಗಿಂತ ಅತ್ಯಂತ ಉತ್ಕೃಷ್ಟ, ವಿಶಾಲ ವಿಸ್ತಾರವಾದ ಜ್ಞಾನಾರ್ಜನೆಗೆ 'ಸ್ಕಿಲ್ ಲ್ಯಾಬ್' ಎಂಬ ವಿಶಿಷ್ಠ ಸೌಲಭ್ಯ ನೀಡುತ್ತಿದ್ದೇವೆ. ಇದರ ಜೊತೆಗೆ ಕೆಂಗೇರಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಉತ್ತಮ ಕಮ್ಯೂನಿಟಿ ತರಬೇತಿಯನ್ನು ನೀಡಲಾಗುತ್ತಿದೆ. ಅದೇ ರೀತಿ ವಿವಿಧ ವಿಷಯಗಳ ಹೆಚ್ಚಿನ ಜ್ಞಾನಾರ್ಜನೆಗಾಗಿ ನಿಮ್ಹಾನ್ಸ್, ಹೃದಯದ ಆಸ್ಪತ್ರೆ, ಹೆರಿಗೆ ಆಸ್ಪತ್ರೆ, ಹುಬ್ಬಳ್ಳಿ ಕಿಮ್ಸ್, ಕಡಬಮ್ಸ್ ಇನ್ನು ಮುಂತಾದ ವಿಶೇಷ ಸ್ಥಳಗಳಿಗೆ ವಿದ್ಯಾರ್ಥಿಗಳನ್ನು ಕಳುಹಿಸಿಕೊಟ್ಟು ಉತ್ತಮ ಗುಣಮಟ್ಟದ ವಿದ್ಯಾರ್ಥಿಗಳನ್ನು ಸೃಷ್ಠಿಸಿ ಸಮಾಜದ ಸೇವೆಗಾಗಿ ಅಣಿಗೊಳಿಸುವ ಪವಿತ್ರ ಕಾರ್ಯವನ್ನು ನಮ್ಮ ವಿದ್ಯಾಲಯವು ಸುಮಾರು 33 ವರ್ಷಗಳಿಂದ ಮಾಡುತ್ತಾ ತನ್ನ ಗುರಿಯನ್ನು ಹಾಗೂ ಒಕ್ಕಲಿಗರ ಸಂಘದ ಧ್ಯೇಯವನ್ನು ಸಾಧಿಸುತ್ತಾ ಮುಂದೆ ಸಾಗುತ್ತಿದೆ. ವಿದ್ಯಾಲಯವು ವಿದ್ಯಾರ್ಥಿಗಳ ಅನುಕೂಲಕ್ಕಾಗಿಯೇ ತನ್ನದೇ ಆದ ಸಾರಿಗೆ ವ್ಯವಸ್ಥೆಯನ್ನು ಹೊಂದಿರುತ್ತದೆ. ಇಲ್ಲಿ ಸರ್ಕಾರದ ಪ್ರವೇಶಗಳ ಅನುಪಾತವನ್ನು ಪಾಲಿಸಲಾಗುತ್ತಿದೆ.

ವಿದ್ಯಾರ್ಥಿಗಳಿಗೆ ಅವರವರ ಪಠ್ಯಕ್ರಮದಂತೆ ಅಗತ್ಯವಿರುವ ಎಲ್ಲಾ ರೀತಿಯ ಜ್ಞಾನವನ್ನು ಅಗತ್ಯವಿರುವ ಸೌಲಭ್ಯಗಳೊಂದಿಗೆ ಗುಣಮಟ್ಟಕ್ಕೆ ಲೋಪ ಬಾರದಂತೆ ಒದಗಿಸಲಾಗುತ್ತಿದೆ.

ರಾಜೀವ್ ಗಾಂಧಿ ವಿಶ್ವವಿದ್ಯಾಲಯದ 2022-23ನೇ ಸಾಲಿನ ಘಟಿಕೋತ್ಸವದಲ್ಲಿ ನಮ್ಮ ಕೆಂಪೇಗೌಡ ಶುಶ್ರೂಷ ವಿದ್ಯಾಲಯದ ಬಿ.ಎಸ್ಸಿ(ನ) ವಿದ್ಯಾರ್ಥಿಗಳು ಒಟ್ಟು 13 ರ್‍ಯಾಂಕ್ ಹಾಗೂ ಪಿ.ಬಿ.ಬಿ.ಎಸ್ಸಿ(ನ) ಒಟ್ಟು 11 ರ್‍ಯಾಂಕ್‌ಗಳು ಪಡೆದಿರುತ್ತಾರೆ.

ವಿವರಗಳು ಈ ಕೆಳಕಂಡಂತಿವೆ:

**ಬಿ.ಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳು:**

01. ತ್ರಯಿ ಅದಕ್, ಅನಾಟಮಿ(1ನೇ ವರ್ಷ), ಕಮ್ಯುನಿಟಿ ಹೆಲ್ತ್ ನರ್ಸಿಂಗ್(02ನೇ ವರ್ಷ), ಕಮ್ಯುನಿಕೇಷನ್ ಮತ್ತು ಎಜುಕೇಷನ್ ಟೆಕ್ನಾಲಜಿ(02ನೇ ವರ್ಷ) ಹಾಗೂ ನರ್ಸಿಂಗ್ ರಿಸರ್ಚ್ & ಸ್ಟ್ಯಾಟಿಸ್ಟಿಕ್ಸ್(3ನೇ ವರ್ಷ) ವಿಷಯಗಳಲ್ಲಿ ಒಟ್ಟು 4 ರ್‍ಯಾಂಕ್‌ಗಳನ್ನು ಪಡೆದಿರುತ್ತಾರೆ.

02. ನೇಹ ಎಲ್ಸಾ ರಾಜನ್, ನ್ಯೂಟ್ರೀಷನ್ & ಡಯಟಿಟಿಕ್ಸ್ (2ನೇ ವರ್ಷ) ವಿಷಯದಲ್ಲಿ ರ್‍ಯಾಂಕ್ ಪಡೆದಿರುತ್ತಾರೆ.

03. ರೇಷ್ಮಾ ಬಾಬು, ಸೋಶಿಯಾಲಜಿ(2ನೇ ವರ್ಷ), ಫಾರ್ಮಕಾಲಜಿ, ಪೆತಾಲಜಿ ಮತ್ತು ಜೆನಿಟಿಕ್ಸ್ (02ನೇ ವರ್ಷ), ಹಾಗೂ ನರ್ಸಿಂಗ್ ರಿಸರ್ಚ್ & ಸ್ಟ್ಯಾಟಿಸ್ಟಿಕ್ಸ್(3ನೇ ವರ್ಷ) ಒಟ್ಟು 3 ರ್‍ಯಾಂಕ್‌ಗಳನ್ನು ಪಡೆದಿರುತ್ತಾರೆ.

04. ಶಿನು ಶಾಜಿ ಹಾಗೂ ಶ್ರೇಷ್ಟ ಸಿಂಗ್ ರಾಯ್, ಸೋಶಿಯಾಲಜಿ(2ನೇ ವರ್ಷ) ವಿಷಯದಲ್ಲಿ ರ್‍ಯಾಂಕ್ ಪಡೆದಿರುತ್ತಾರೆ.

05. ನಯನ ಬೊಬಿನ್, ಕಮ್ಯುನಿಟಿ ಹೆಲ್ತ್ ನರ್ಸಿಂಗ್(2ನೇ ವರ್ಷ) ವಿಷಯದಲ್ಲಿ ರ್‍ಯಾಂಕ್ ಪಡೆದಿರುತ್ತಾರೆ.

06. ಸೋನಾ ಮ್ಯಾಥಿವ್, ಕಮ್ಯುನಿಕೇಷನ್ ಮತ್ತು ಎಜುಕೇಷನ್ ಟೆಕ್ನಾಲಜಿ(2ನೇ ವರ್ಷ) ಹಾಗೂ ಸ್ಫೂರ್ತಿ.ಎಸ್.ಎನ್ ನರ್ಸಿಂಗ್ ರಿಸರ್ಚ್ & ಸ್ಟ್ಯಾಟಿಸ್ಟಿಕ್ಸ್(3ನೇ ವರ್ಷ) ಇಬ್ಬರು ತಲಾ ಒಂದು ರ್‍ಯಾಂಕ್ ಪಡೆದಿರುತ್ತಾರೆ.









**ಪಿ.ಬಿ.ಬಿ.ಎಸ್ಸಿ(ನ) ವಿದ್ಯಾರ್ಥಿಗಳು:**

1. ರಷ್ನಾ.ಎ, ನರ್ಸಿಂಗ್ ಫೌಂಡೇಷನ್(1ನೇ ವರ್ಷ) ಮತ್ತು ನ್ಯೂಟ್ರೀಷನ್ & ಡಯಟಿಟಿಕ್ಸ್(1ನೇ ವರ್ಷ) ಒಟ್ಟು 2 ವಿಷಯಗಳಲ್ಲಿ ರ್‍ಯಾಂಕ್ ಪಡೆದಿರುತ್ತಾರೆ.

2. ಅಮೃತ ಝುವಿಯರ್ ನರ್ಸಿಂಗ್ ಫೌಂಡೇಷನ್(1ನೇ ವರ್ಷ), ನ್ಯೂಟ್ರೀಷನ್ & ಡಯಟಿಟಿಕ್ಸ್(1ನೇ ವರ್ಷ), ಇನ್ರ್ಟೊಡಕ್ಷನ್ ಟು ನರ್ಸಿಂಗ್ ಫೌಂಡೇಷನ್(2ನೇ ವರ್ಷ) ಈ ಮೂರು ವಿಷಯಗಳಲ್ಲಿ ರ್‍ಯಾಂಕ್ ಪಡೆದಿರುತ್ತಾರೆ.

3. ವಾನ್‌ಲಾಲ್ ರುಹಾಟಿ, ನರ್ಸಿಂಗ್ ಫೌಂಡೇಷನ್(1ನೇ ವರ್ಷ) ವಿಷಯದಲ್ಲಿ ರ್‍ಯಾಂಕ್ ಪಡೆದಿರುತ್ತಾರೆ.

4. ಲೋವಿಟಾ ಸಾಜಿ, ನರ್ಸಿಂಗ್ ಫೌಂಡೇಷನ್(1ನೇ ವರ್ಷ), ನ್ಯೂಟ್ರೀಷನ್ & ಡಯಟಿಟಿಕ್ಸ್(1ನೇ ವರ್ಷ), ಸೈಕಾಲಜಿ(1ನೇ ವರ್ಷ,) ಸೋಶಿಯಾಲಜಿ(1ನೇ ವರ್ಷ), ಕಮ್ಯುನಿಟಿ ಹೆಲ್ತ್ ನರ್ಸಿಂಗ್(2ನೇ ವರ್ಷ), ಈ ಎಲ್ಲಾ ವಿಷಯಗಳಲ್ಲಿ ರ್‍ಯಾಂಕ್ ಪಡೆದಿರುತ್ತಾರೆ.

ರಾಜೀವ್ ಗಾಂಧಿ ವಿಶ್ವ ವಿದ್ಯಾಲಯದ ಆದೇಶ ಮತ್ತು ಸಹಯೋಗದೊಂದಿಗೆ ENLS (Emergency Nursing Life Support) ತರಬೇತಿಯನ್ನು ನಮ್ಮ ಸಂಸ್ಥೆಯ ಕೊನೆಯ ವರ್ಷದ ಬಿ.ಎಸ್ಸಿ(ನ), ಪಿ.ಬಿ.ಬಿ.ಎಸ್ಸಿ(ನ), ಎಂ.ಎಸ್ಸಿ(ನ) ಮತ್ತು ಎನ್.ಪಿ.ಸಿ.ಸಿ ವಿದ್ಯಾರ್ಥಿಗಳಿಗೆ ಜುಲೈ ಮತ್ತು ನವೆಂಬರ್ ತಿಂಗಳಲ್ಲಿ ನೀಡಲಾಯಿತು.



ನಮ್ಮ ಸಂಸ್ಥೆ, ಆಂಗ್ಲೊ ಇಂಡಿಯನ್ ಫೌಂಡೇಷನ್ ಮತ್ತು ಗಾರ್ಷೋಮ್ ಫೌಂಡೇಷನ್ ಸಹಯೋಗದೊಂದಿಗೆ 2023 ನೇ ಸಾಲಿನ ಅಂತರಾಷ್ಟ್ರೀಯ ಶುಶ್ರೂಷ ದಿನಾಚರಣೆಯನ್ನು ಮೇ–12 ರಂದು ಕುವೆಂಪು ಕಲಾಕ್ಷೇತ್ರದಲ್ಲಿ ವಿಜೃಂಬಣೆಯಿಂದ ಆಚರಿಸಲಾಯಿತು. ಮುಂದುವರೆದಂತೆ, ಕರ್ನಾಟಕ ಸರ್ಕಾರ, ನಮ್ಮ ಸಂಸ್ಥೆ ಹಾಗೂ ಆಂಗ್ಲೊ ಇಂಡಿಯನ್ ಫೌಂಡೇಷನ್ ಸಹಯೋಗದೊಂದಿಗೆ 13–06–2023 ರಂದು ಅಂತರಾಷ್ಟ್ರೀಯ ಶುಶ್ರೂಷ ದಿನಾಚರಣೆಯನ್ನು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮುಖ್ಯಮಂತ್ರಿಗಳ ಉಪಸ್ಥಿತಿಯಲ್ಲಿ ಆಚರಿಸಲಾಯಿತು.

ವಿದ್ಯಾಲಯದಲ್ಲಿ ಅನುಭವಿ ಬೋಧಕರನ್ನು ಹೊಂದಿದ್ದು ವಿದ್ಯಾರ್ಥಿಗಳಿಗೆ ಒಳ್ಳೆಯ ಬೋಧನೆಯನ್ನು ನೀಡಲಾಗುತ್ತಿದೆ. ಕೆಂಪೇಗೌಡ ಶುಶ್ರೂಷ ವಿದ್ಯಾಲಯವು ಇಡೀ ರಾಜ್ಯದಲ್ಲಿ ಉತ್ತಮ ವಿದ್ಯಾಲಯವಾಗಿ ಗುರುತಿಸಲ್ಪಟ್ಟಿದ್ದು ಉತ್ತಮ ಗುಣಮಟ್ಟವನ್ನು ಕಾಯ್ದುಕೊಂಡು ಬರುತ್ತಿದೆ. ಬಿ.ಎಸ್ಸಿ ನರ್ಸಿಂಗ್, ಜನರಲ್ ನರ್ಸಿಂಗ್ ಮಿಡ್‌ವೈಫರಿ, ಎಂ.ಎಸ್ಸಿ, ಪಿ.ಬಿ.ಬಿ.ಎಸ್ಸಿ ಮತ್ತು ಎನ್.ಪಿ.ಸಿ.ಸಿ ಕೋರ್ಸಿಗೆ ಬೋಧಕ ಸಿಬ್ಬಂದಿಗಳು, ಪ್ರಾಂಶುಪಾಲರು ಸೇರಿದಂತೆ, ಪ್ರೊಫೆಸರ್‌ಗಳು, ಸಹಾಯಕ ಪ್ರಾಧ್ಯಾಪಕರು ಮತ್ತು ಉಪನ್ಯಾಸಕರು ಸೇರಿರುತ್ತಾರೆ.

**– ಪ್ರಾಂಶುಪಾಲರು**



**ಡಾ. ವಿ.ಟಿ.ಲಕ್ಷ್ಮಮ್ಮ**
ಪ್ರಾಂಶುಪಾಲರು,
ಕೆಂಪೇಗೌಡ ಶುಶ್ರೂಷ ಸಂಸ್ಥೆ




ರಾಜ್ಯ ಒಕ್ಕಲಿಗರ ಸಂಘದ ಆಶ್ರಯದಲ್ಲಿ ನಡೆಯುವ ಅನೇಕ ವಿದ್ಯಾಸಂಸ್ಥೆಗಳಲ್ಲಿ ವಿಶ್ವೇಶ್ವರಪುರ ವಿಜ್ಞಾನ ಕಾಲೇಜು ಒಂದು. ವಿಜ್ಞಾನ ಕಾಲೇಜು ಸ್ಥಾಪನೆಯಾದದ್ದು 1966ರಲ್ಲಿ. ಪ್ರಾರಂಭದಲ್ಲಿ ಕಲೆ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜುಗಳು ಒಟ್ಟಿಗೆ ಇತ್ತು. 1980ರಲ್ಲಿ ವಿಜ್ಞಾನ ಕಾಲೇಜು ಕಲೆ ಮತ್ತು ವಾಣಿಜ್ಯ ಕಾಲೇಜುಗಳಿಂದ ಬೇರ್ಪಟ್ಟು ತನ್ನದೇ ಆದ ಸ್ವಂತ, ಸುಸಜ್ಜಿತ ಕಟ್ಟಡವನ್ನು ಹೊಂದಿತು. ರಾಷ್ಟ್ರಕವಿ ಶ್ರೀ ಕುವೆಂಪುರವರಿಂದ ಉದ್ಘಾಟಿಸಲ್ಪಟ್ಟ ಈ ಕಾಲೇಜು ಬೆಂಗಳೂರಿನ ಅಪ್ಪಟ ವಿಜ್ಞಾನ ಕಾಲೇಜುಗಳಲ್ಲಿ ಒಂದು ಎಂಬ ಹೆಮ್ಮೆಗೆ ಪಾತ್ರವಾಗಿದೆ. ಹಳ್ಳಿಗಾಡಿನಿಂದ ಬರುವ ರೈತಾಪಿವರ್ಗ ವಿದ್ಯಾರ್ಥಿಗಳಿಗೆ ಉನ್ನತ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶವನ್ನು ಗುರಿಯಾಗಿಸಿಕೊಂಡು ಅತ್ಯಂತ ಕಡಿಮೆ ವೆಚ್ಚದಲ್ಲಿ ತಮ್ಮ ವಿದ್ಯಾಭ್ಯಾಸ ಪೂರೈಸಲು ಅವಕಾಶ ಕಲ್ಪಿಸಿದೆ.

ವಿಶ್ವೇಶ್ವರಪುರ ವಿಜ್ಞಾನ ಕಾಲೇಜು ಯು.ಜಿ.ಸಿ. ಗ್ರ್ಯಾಂಟ್ಸ್ ಪಡೆದಿರುತ್ತದೆ. ಮತ್ತು ನ್ಯಾಕ್ ಮಾನ್ಯತೆಯನ್ನು ಕಾಲಕಾಲಕ್ಕೆ ನವೀಕರಿಸಿಕೊಂಡಿರುತ್ತದೆ. ಪ್ರಾರಂಭದಲ್ಲಿ ಪದವಿಪೂರ್ವ ಮತ್ತು ಪದವಿ ತರಗತಿಗಳಷ್ಟೇ ಇದ್ದು, ನಂತರ 1994ರಲ್ಲಿ ರಸಾಯನಶಾಸ್ತ್ರ (Chemistry) MSc ಸ್ನಾತಕೋತ್ತರ ವಿಭಾಗವನ್ನೂ, 2002ರಲ್ಲಿ ಬಯೋಟೆಕ್ನಾಲಜಿ ಸ್ನಾತಕೋತ್ತರ ವಿಭಾಗವನ್ನೂ ಆರಂಭಿಸಿರುತ್ತದೆ. ಸಾವಿರಾರು ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸಿರುವ ಈ ಕಾಲೇಜು ಆರಂಭದಲ್ಲಿ PCM, PME, CBZ, CBS ಮುಂತಾದ ಸಂಯೋಜನೆಗಳನ್ನು ಮಾತ್ರ ಹೊಂದಿತ್ತು. ಪ್ರೊ. ಶಾಂತ ಕೆ.ವಿ.ರವರು ಪ್ರಾಂಶುಪಾಲರಾಗಿದ್ದಾಗ ಹೊಸಹೊಸ ಸಂಯೋಜನೆಗಳಾದ ಮೈಕ್ರೋಬಯಾಲಜಿ, ಬಯೋಟೆಕ್ನಾಲಜಿ, ಗಣಕ ವಿಜ್ಞಾನ ಬಿ.ಸಿ.ಎ. ಮುಂತಾದ ಅನ್ವಯಿಕ ವಿಜ್ಞಾನದ ಕೋರ್ಸ್‌ಗಳನ್ನು ಪ್ರಾರಂಭಿಸಲಾಯಿತು.



**ಶ್ರೀ ದೇವರಾಜು (ಹಾಪ್‌ಕಾಮ್ಸ್)**
**ಅಧ್ಯಕ್ಷರು**
ಕಾಲೇಜು ಆಡಳಿತ ಮಂಡಳಿ
ವಿಶ್ವೇಶ್ವರಪುರ ವಿಜ್ಞಾನ ಕಾಲೇಜು




ಪದವಿಪೂರ್ವ ವಿಭಾಗದಲ್ಲಿ PCMB, PCME ಸಂಯೋಜನೆ–ಗಳನ್ನು ಹೊಂದಿದ್ದು ಸಹಸ್ರಾರು ಮಂದಿ ವಿದ್ಯಾರ್ಥಿಗಳನ್ನು ವಿವಿಧ ಉನ್ನತ ಕೋರ್ಸ್‌ಗಳಲ್ಲಿ ತರಬೇತಿ ಪಡೆಯುವ ಅವಕಾಶವನ್ನು ಕಲ್ಪಿಸಿಕೊಟ್ಟಿದೆ.



ಬೆಂಗಳೂರಿನ ಹೃದಯ ಭಾಗದಲ್ಲಿರುವ ಈ ಕಾಲೇಜಿಗೆ ಬಸ್ ವ್ಯವಸ್ಥೆ, ಮೆಟ್ರೋ ವ್ಯವಸ್ಥೆಗಳ ಸೌಕರ್ಯವಿದೆ. ವ್ಯವಸ್ಥಿತವಾದ ಪ್ರಯೋಗಾಲಯಗಳು, ಸುಸಜ್ಜಿತವಾದ, 30000ಕ್ಕೂ ಹೆಚ್ಚು ಗ್ರಂಥಗಳನ್ನು ಹೊಂದಿರುವ ಗ್ರಂಥಾಲಯ, ವಿಶಾಲವಾದ, ಗಾಳಿ ಬೆಳಕಿನ ವ್ಯವಸ್ಥೆ ಇರುವ ತರಗತಿಯ ಕೊಠಡಿಗಳು, ವಾಚನಾಲಯ,





ಸುಸಜ್ಜಿತ ಸಭಾಂಗಣವನ್ನು ಹೊಂದಿರುವ ಈ ಕಾಲೇಜು ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಹೊಂದಿದೆ.

ನಮ್ಮ ಕಾಲೇಜಿನಲ್ಲಿರುವ ಸಂಯೋಜನೆ (Combination) ಗಳ ಬಗ್ಗೆ Physics, Maths combination ತೆಗೆದುಕೊಂಡು ಓದುವ ವಿದ್ಯಾರ್ಥಿಗಳಿಗೆ ವಿಫುಲ ಅವಕಾಶಗಳಿವೆ. ಮೂಲವಿಜ್ಞಾನವನ್ನೂ ಕಲಿಯುವ ಈ ವಿದ್ಯಾರ್ಥಿಗಳು ಶಾಲೆಗಳಲ್ಲಿ ಬೋಧಕರಾಗಿ, ಕಾಲೇಜುಗಳಲ್ಲಿ, ಉಪನ್ಯಾಸಕರಾಗಿ, ಸಂಶೋಧಕರಾಗಿ, ವಿವಿಧ ಕಂಪನಿಗಳಲ್ಲಿ ತಮ್ಮ ವೃತ್ತಿ ಜೀವನವನ್ನು ಕಂಡುಕೊಳ್ಳಬಹುದು.



Chemistry ಅಭ್ಯಸಿಸಿದ ವಿದ್ಯಾರ್ಥಿಗಳಿಗೆ Pharmaceutical Company ಗಳಲ್ಲಿ, Teaching (high school, college) ನಲ್ಲಿ, Research & Development ಉದ್ಯೋಗವಕಾಶಗಳಿವೆ.



Microbiology, Biotechnology ಓದುವ ವಿದ್ಯಾರ್ಥಿಗಳಿಗೆ ಆಹಾರ ಸಂಸ್ಕರಣೆ ಕಂಪನಿಗಳು, Pharmaceutical, Biocon ಮುಂತಾದ ಸಂಸ್ಥೆಗಳಲ್ಲಿ, Teaching ನಲ್ಲಿ ವಿಫುಲ ಅವಕಾಶಗಳಿವೆ.

ಪ್ರಾಣಿಶಾಸ್ತ್ರ(Zoology), Botany ಅಭ್ಯಸಿಸುವ ವಿದ್ಯಾರ್ಥಿಗಳಿಗೆ ಶಾಲಾ ಕಾಲೇಜುಗಳಲ್ಲಿ ಬೋಧನೆ, ಸಂಶೋಧನೆ, ಕಂಪನಿಗಳಲ್ಲಿ ಸಾಕಷ್ಟು ಉದ್ಯೋಗವಕಾಶಗಳಿವೆ.

ಬಿಸಿಎ – ಓದುವ ವಿದ್ಯಾರ್ಥಿಗಳಿಗೆ IT, MNC ಗಳಲ್ಲಿ, Teaching ನಲ್ಲಿ ಸಾಕಷ್ಟು ಉದ್ಯೋಗವಕಾಶಗಳಿವೆ.



ನಿಯಮಿತವಾಗಿ ಸಾಂಸ್ಕೃತಿಕ ಚಟುವಟಿಕೆಗಳು, ಕ್ರೀಡಾ ಚಟುವಟಿಕೆಗಳು, ಎನ್.ಎಸ್.ಎಸ್. ಅಂತರಕಾಲೇಜು ಸ್ಪರ್ಧೆಗಳನ್ನು (ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ) ಏರ್ಪಡಿಸುವುದರ ಮೂಲಕ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಕಾಲೇಜು ಸದಾ ಶ್ರಮಿಸುತ್ತದೆ. ಗುಣಮಟ್ಟದ ಶಿಕ್ಷಣ, ಮಾನವೀಯ ಮೌಲ್ಯಗಳನ್ನು, ವಿದ್ಯಾರ್ಥಿಗಳಲ್ಲಿ ಜಾಗೃತಗೊಳಿಸುವುದು ಶಿಕ್ಷಕರ ಮಹತ್ವದ ಗುರಿಯಾಗಿದೆ. 'ಏನಾದರೂ ಆಗು ಮೊದಲು ಮಾನವನಾಗು' ಎಂಬ ಕವಿವಾಣಿಯಂತೆ ವಿದ್ಯಾರ್ಥಿಗಳನ್ನು ಸತ್‌ಪ್ರಜೆಗಳನ್ನಾಗಿಸುವ ಆಶಯವನ್ನು ಶಿಕ್ಷಕರು ಹೊಂದಿರುತ್ತಾರೆ.






2020–21ರಲ್ಲಿ NEP ಅನುಷ್ಠಾನಗೊಂಡು ಸಂಯೋಜನೆಗಳು ಬದಲಾಗಿ ಐಚ್ಛಿಕ ವಿಷಯವನ್ನು ವಿದ್ಯಾರ್ಥಿಗಳು ತಮ್ಮ ಇಚ್ಛಾನುಸಾರ ವಿಜ್ಞಾನದ ಎರಡು ವಿಷಯಗಳೊಂದಿಗೆ ಕಲೆ, ವಾಣಿಜ್ಯ ಇತರ ಯಾವುದೇ ವಿಷಯವನ್ನು OE ಆಗಿ ಅಭ್ಯಸಿಸಲು ಅವಕಾಶ ಕಲ್ಪಿಸಿದೆ. ಇದರಿಂದ ವಿದ್ಯಾರ್ಥಿಗಳಿಗೆ ಅನೇಕ ವಿಷಯಗಳ ಬಗ್ಗೆ ಅರಿವು ಮೂಡಿಸಲು ಸಾಧ್ಯವಿದೆ.

– **ಪ್ರೊ. ಗಾಯತ್ರಿ**
ಕನ್ನಡ ವಿಭಾಗ, ವಿ.ವಿ.ಪುರ ವಿಜ್ಞಾನ ಕಾಲೇಜು

# ಕಲಿಯುವವರ ಕಲ್ಪವೃಕ್ಷ

# ವಿ.ವಿ ಪುರ ಸಂಜೆ ಕಾಲೇಜು

K.R. Road, Bengaluru - 560 004





**ಶ್ರೀ ದೇವರಾಜು (ಹಾಪ್‌ಕಾಮ್ಸ್)**
ಅಧ್ಯಕ್ಷರು
ಕಾಲೇಜು ಆಡಳಿತ ಮಂಡಳಿ
ವಿಶ್ವೇಶ್ವರಪುರ ಕಲೆ ಮತ್ತು ವಾಣಿಜ್ಯ ಸಂಜೆ ಕಾಲೇಜು

**ಡಾ. ವೈ. ಪ್ರಕಾಶ್**
ಪ್ರಾಂಶುಪಾಲರು
ವಿಶ್ವೇಶ್ವರಪುರ ಕಲೆ ಮತ್ತು ವಾಣಿಜ್ಯ ಸಂಜೆ ಕಾಲೇಜು



'ಬಾಯಾರಿಕೆಯನ್ನು ನೀಗಿಸುವವು ಸಣ್ಣ ಪುಟ್ಟ ಸಿಹಿನೀರಿನ ಒರತೆಗಳೇ ಹೊರತು ಉಪ್ಪು ನೀರಿನ ದೊಡ್ಡ ದೊಡ್ಡ ಸಮುದ್ರಗಳಲ್ಲ' ಎಂಬುದೊಂದು ಮಾತಿದೆ. ಸಣ್ಣ ಪುಟ್ಟ ಒರತೆಗಳೇ ಬಾಯಾರಿಕೆಯನ್ನು ನೀಗಿಸುವಾಗ ಆ ಒರತೆಗಳು ಸರೋವರಗಳಾದರೆ ಇನ್ನೆಷ್ಟು ದಾಹವನ್ನು ಹಿಂಗಿಸಬಹುದು. ಈ ಮಾತಿಗೆ ಪೂರಕವಾದ ಉದಾಹರಣೆಯೆಂದರೆ ರಾಜ್ಯ ಒಕ್ಕಲಿಗರ ಸಂಘವು ನಡೆಸುತ್ತಿರುವ ವಿದ್ಯಾ ಸಂಸ್ಥೆಗಳು. 1906 ರಲ್ಲಿ ತಲೆಯೆತ್ತಿದ ಶಿಕ್ಷಣ ಪ್ರಸಾರವನ್ನೇ ಪ್ರಧಾನ ಗುರಿಯನ್ನಾಗಿಸಿಕೊಂಡು ರಾಜ್ಯ ಒಕ್ಕಲಿಗರ ಸಂಘವು 1966ರಲ್ಲಿ ವಿಶ್ವೇಶ್ವರಪುರ ಕಲೆ ಮತ್ತು ವಾಣಿಜ್ಯ ಪದವಿ ಮತ್ತು ಪದವಿ ಪೂರ್ವ ಸಂಜೆ ಕಾಲೇಜನ್ನು ಆರಂಭಿಸಿತು.

ಸಂಸ್ಕೃತದಲ್ಲಿ 'ವಿದ್ಯಾ ವಿಹೀನಃ ಪಶು' ಎಂಬ ಮಾತಿನಂತೆ ಸಂಜೆ ಕಾಲೇಜನ್ನು ತೆರೆದುದರ ಹಿಂದೆ ಒಂದು ಮಹತ್ತರವಾದ ಸದುದ್ದೇಶವೂ ಅಡಗಿದೆ. ಈ ದೇಶದ ಬೆನ್ನೆಲುಬು ಅನ್ನದಾತರಾದ ರೈತಾಪಿ ಸಮುದಾಯದವರು, ಶ್ರಮಿಕ ವರ್ಗದವರು ಗ್ರಾಮೀಣ ಪ್ರದೇಶದವರು, ಹಾಗೂ ಕೂಲಿ ಕಾರ್ಮಿಕರು. ದೇಶ ಕಟ್ಟುವಲ್ಲಿ ಇವರ ಪಾತ್ರ ಬಹಳ ಮುಖ್ಯ. ಅವರಿಗೆ ಶಿಕ್ಷಣ ಅನಿವಾರ್ಯ. ಆದರೆ ಬಡತನ, ಆರ್ಥಿಕ ಸಮಸ್ಯೆಗಳು, ಅನಾನುಕೂಲಗಳು, ಕೌಟುಂಬಿಕ ಸಮಸ್ಯೆಗಳು, ಸಮಯ ಹಾಗೂ ಇನ್ನಿತರ ಕಾರಣಗಳಿಂದಾಗಿ ಶಿಕ್ಷಣದಿಂದ ವಂಚಿತರಾಗಿ ತಮ್ಮ ಬದುಕನ್ನೇ ಬರಡಾಗಿಸಿಕೊಂಡವರು ಅನೇಕರು. ಇಂತಹ ಅನಾನುಕೂಲಗಳಿಂದ ಮುಕ್ತಗೊಳಿಸಲು ರಾಜ್ಯ ಒಕ್ಕಲಿಗರ ಸಂಘವು ವಿಶ್ವೇಶ್ವರಪುರ ಕಲೆ ಮತ್ತು ವಾಣಿಜ್ಯ ಪದವಿ ಮತ್ತು ಪದವಿ ಪೂರ್ವ ಸಂಜೆ ಕಾಲೇಜನ್ನು ಬೆಂಗಳೂರಿನ ಹೃದಯಭಾಗದಲ್ಲಿನ ತನ್ನ ಸಂಘದ ಆವರಣದಲ್ಲಿರುವ ಈಗಿನ ಕಟ್ಟಡದಲ್ಲಿ ಆರಂಭಿಸಿತು.

ಶಿಕ್ಷಣವನ್ನೇ ವ್ಯಾಪಾರ ಕೇಂದ್ರವನ್ನಾಗಿಸಿಕೊಂಡಿರುವ ಇಂದಿನ ಕಾಲಮಾನದಲ್ಲಿ ಅಕ್ಷರ ದಾಸೋಹಕ್ಕಾಗಿಯೇ ಇಡೀ ಬೆಂಗಳೂರು ನಗರದಲ್ಲಿಯೇ ಇನ್ನೆಲ್ಲಿಯೂ ಕಾಣದಂತಹ ಅತೀ ಕಡಿಮೆ ಶುಲ್ಕದಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಒದಗಿಸುತ್ತಿರುವ ಏಕೈಕ ಸಂಸ್ಥೆ ಹಾಗೂ ಕಾಲೇಜು. ಸಮುದಾಯದ ಬಡ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿ ನಿಲಯದಲ್ಲಿ ಸೌಲಭ್ಯವನ್ನು ಒದಗಿಸಿಕೊಟ್ಟು ಅವರ ಕಲಿಕೆಗೆ ನೀರೆರೆಯುತ್ತಾ ಬಂದಿದೆ. ಕೆ.ಆರ್ ಮಾರ್ಕೆಟ್‌ನ ಬಸ್ ನಿಲ್ದಾಣ ಬಹುಮುಖ್ಯವಾಗಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಹಾಗೂ ಬೆಂಗಳೂರು ನಗರದ ಎಲ್ಲಾ ಭಾಗದ ವಿದ್ಯಾರ್ಥಿಗಳಿಗೂ ಸಂಪರ್ಕ ಕೇಂದ್ರವಾಗಿದ್ದು, ಎಲ್ಲದಕ್ಕೂ ಅನುಕೂಲವಾಗುವಂತಿದೆ. ಇತ್ತೀಚೆಗೆ ಕಾಲೇಜಿನ ಎದುರುಗಡೆಯೇ ಮೆಟ್ರೋ ನಿಲ್ದಾಣವೂ ನಿರ್ಮಾಣವಾಗಿದೆ. ವಿಶ್ವೇಶ್ವರಪುರ ಕಲೆ ಮತ್ತು ವಾಣಿಜ್ಯ ಪದವಿ ಮತ್ತು ಪದವಿ ಪೂರ್ವ ಸಂಜೆ ಕಾಲೇಜಿಗೆ ರಾಮನಗರ, ಚನ್ನಪಟ್ಟಣ, ಬಿಡದಿ, ಕೆಂಗೇರಿ,



ಮಾಗಡಿ, ನೆಲಮಂಗಲ, ಯಲಹಂಕ, ಕೆ.ಆರ್ ಪುರಂ, ಹೊಸಕೋಟೆ, ಬನ್ನೇರುಘಟ್ಟ, ಆನೇಕಲ್ಲು, ಹಾರೋಹಳ್ಳಿಗಳಿಂದ ಪ್ರತಿದಿನ ವಿದ್ಯಾರ್ಥಿಗಳು ಬಂದು ಕಲಿಯುತ್ತಿರುವುದರ ಜೊತೆಗೆ, ನಗರದ ಇತರ ಭಾಗಗಳಿಂದಲೂ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ. ಅಲ್ಲದೆ ರಾಜ್ಯದ ಎಲ್ಲಾ ಮೂಲೆ ಮೂಲೆಗಳ ವಿದ್ಯಾರ್ಥಿಗಳೂ ಸಹ ಸಂಜೆ ಕಾಲೇಜಿನಲ್ಲಿ ಕಲಿಯುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.



ಇದು ಶಿಕ್ಷಣ ವಂಚಿತರು ಈ ಸಂಜೆಕಾಲೇಜಿನಿಂದ ಪಡೆದುಕೊಂಡ ಅವಕಾಶಗಳಾದರೆ, ಇನ್ನು ವಿವಿಧ ಇಲಾಖೆಗಳಲ್ಲಿ ನೌಕರರಾಗಿ ದುಡಿಯುತ್ತಿದ್ದು, ತಮ್ಮ ಮೊಟಕುಗೊಂಡ ಶಿಕ್ಷಣವನ್ನು ಪೂರ್ಣಗೊಳಿಸಿಕೊಳ್ಳಲು ಮತ್ತು ಉನ್ನತ ಹುದ್ದೆಗೇರಲು, ಬಡ್ತಿಗಳಿಗಾಗಿ ಅರಸಿ ಬರುವ ವಿವಿಧ ಇಲಾಖೆಯ ವಿದ್ಯಾರ್ಥಿಗಳನ್ನೂ ಇಲ್ಲಿ ಕಾಣಬಹುದಾಗಿದೆ. ಇನ್ನುಳಿದಂತೆ ಖಾಸಗಿ ಕಂಪನಿಗಳಲ್ಲಿ ಉದ್ಯೋಗ ಮಾಡುವವರು, ಸ್ವಯಂ ಉದ್ಯೋಗಿಗಳು, ರಾಜಕಾರಣದ ಒಡನಾಟವಿರುವವರನ್ನೂ ಸಹ ಈ ಕಾಲೇಜು ಪದವೀಧರರನ್ನಾಗಿ ಮಾಡಿ ಕಳಿಸುವ ಹೊಣೆ ಹೊತ್ತಿದೆ. ವಿದಾನಸೌಧ, ಎಂ.ಎಸ್ ಕಟ್ಟಡ, ಕಾವೇರಿ ಭವನ, ಕೆ.ಇ.ಬಿ, ಕೆ.ಎಸ್.ಆರ್.ಟಿ.ಸಿ, ಬಿ.ಎಂ.ಟಿ.ಸಿ., ಪೊಲೀಸ್,





ಪ್ರಾಥಮಿಕ ಶಿಕ್ಷಣ ಹಾಗೂ ಇನ್ನಿತರ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಾ ಜೊತೆ ಜೊತೆಗೇ ಕಲಿಕೆಯನ್ನೂ ಮುಂದುವರೆಸುತ್ತಿದ್ದಾರೆ.

ಹಳ್ಳಿಗಳಿಂದ ಮೊದಮೊದಲು ಬೆಂಗಳೂರಿನ ಬದುಕಿಗೆ ಬಂದ ಕೆಲವು ವಿದ್ಯಾರ್ಥಿಗಳು ಇಲ್ಲಿನ ಒತ್ತಡ, ಸೊಬಗಿನ ಬೆರಗು, ಕಾಸ್ಮೋ ಪಾಲಿಟನ್ ಸಂಸ್ಕೃತಿಯ ಆಘಾತವನ್ನು ಎದುರಿಸಬೇಕಾದ ಸಂದರ್ಭ ಬರುತ್ತದೆ. ಅಂತಹವರಿಗೆ ಸ್ಥಿತ್ಯಂತರದ ಸೇತುವೆಯಾಗಿ ಆತ್ಮವಿಶ್ವಾಸ ಹಾಗೂ ಜೀವನ ಕೌಶಲ್ಯವನ್ನು ನೀಡುತ್ತಾ ಬಂದಿದೆ. ನಮ್ಮ ವಿದ್ಯಾರ್ಥಿಗಳು ಈಗಾಗಲೇ ಹಲವು ಕ್ಷೇತ್ರಗಳಲ್ಲಿ ದುಡಿದ ಅನುಭವವಿರುವವರು. ಕಷ್ಟ ಸುಖಗಳನ್ನು ಉಂಡವರು, ಬದುಕಿನ ನೊಗವನ್ನು ಹೊತ್ತವರು. ತಾನು ದುಡಿದು, ತನ್ನ ಕುಟುಂಬವನ್ನು ಸಾಕಿ ತಾನೂ ಕಲಿಯುವ ಆಸಕ್ತಿಯುಳ್ಳವರು. ಜವಾಬ್ದಾರಿಯುಳ್ಳವರು. ಹಾಗಾಗಿ ಕಾಲೇಜಿನಲ್ಲಿ ಯಾವುದೇ ಕೆಟ್ಟ ವಾತಾವರಣ, ಹಾಗೂ ಅಹಿತಕರ ಘಟನೆಗಳಿಗೆ ಅವಕಾಶ ಮಾಡಿಕೊಡದೆ ಸಂಸ್ಥೆಯ ಘನತೆಗೆ ತಕ್ಕಂತೆ ನಡೆವ ಯೋಗ್ಯರು.

ಇದು 1991 ರಲ್ಲೇ ಕರ್ನಾಟಕ ಸರ್ಕಾರದಿಂದ ಅನುದಾನಕ್ಕೊಳಪಟ್ಟಿದೆ. ಸಂಜೆ ಕಾಲೇಜಿನಲ್ಲಿ ಕಲಿಕೆಯ ಸಮಯ ಸಂಜೆ 05.30 ರಿಂದ ರಾತ್ರಿ 09.00 ಗಂಟೆಯ ಸಮಯವಾಗಿರುವುದರಿಂದ ಕಲಿಕೆ ಮತ್ತು ಗಳಿಕೆಯ ಸೂತ್ರಕ್ಕೆ ಬದ್ಧವಾಗಿ ಕಲಿಸುತ್ತಿದ್ದು, ಯಾರ ದುಡಿಮೆಯ ಮೇಲೂ ಹೊರೆಯಾಗದಂತೆ ವಿದ್ಯಾರ್ಥಿ ಸ್ನೇಹಿಯಾಗಿದೆ. ಕೆಲವರ ದೃಷ್ಟಿಯಲ್ಲಿ ಸಂಜೆ ಕಾಲೇಜೆಂದರೆ ಕರೆಸ್ಪಾಂಡೆನ್ಸ್ ಎಂಬ ತಪ್ಪು ಗ್ರಹಿಕೆಯಿದೆ. ಆದರೆ








ಇದು ಕಾಲೇಜಿನ ಸಮಯದ ವ್ಯತ್ಯಾಸವೊಂದನ್ನು ಹೊರತುಪಡಿಸಿದರೆ ಯಾವುದೇ ವ್ಯತ್ಯಾಸವಿರುವುದಿಲ್ಲ. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳು, ಸಾಹಿತ್ಯ, ಕ್ರೀಡೆಗಳನ್ನು ನಡೆಸಲಾಗುತ್ತದೆ. ಎನ್.ಎಸ್.ಎಸ್, ರೆಡ್ ಕ್ರಾಸ್, ಘಟಕಗಳಿಂದ ವಿಶೇಷ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ಸಂಜೆ ಕಾಲೇಜಿನ ಇನ್ನೊಂದು ವಿಶೇಷವೆಂದರೆ ಇಲ್ಲಿ 16ರ ವಯೋಮಾನದವರಿಂದ 55ರ ವಯೋಮಾನದ ತನಕವಿರುವ ಮಹಿಳೆಯರು ಹಾಗೂ ಪುರುಷರು ಯಾವುದೇ ಮುಜುಗರಕ್ಕೊಳಗಾಗದೆ ಎಲ್ಲರೊಳಗೊಂದಾಗಿ ಕಲಿಯುವುದು, ಬೆರೆಯುವುದು. ಏಕ ಕಾಲದಲ್ಲಿಯೇ ತಾಯಿ–ಮಗ, ತಾಯಿ–ಮಗಳು, ತಂದೆ–ಮಗ, ತಂದೆ ಮಗಳು, ತಾಯಿ–ಮಗ–ಮಗಳು, ಕಲಿಯುತ್ತಿರುವುದು, ಕಂಕುಳಲ್ಲಿ ಮಗುವಿರಿಸಿಕೊಂಡು ಬಂದು ಕಲಿಯುವವರು ಸಂಜೆ ಕಾಲೇಜಿನ ವಿಶೇಷಗಳಲ್ಲೊಂದು. ಕಛೇರಿಯ ಸಮಸ್ಯೆಗಳು ಕುಟುಂಬದ ಸಮಸ್ಯೆಗಳು, ವ್ಯಾಪಾರ ವಹಿವಾಟುಗಳ ಜಂಜಡದಲ್ಲಿಯೂ ಕಲಿಕೆಯನ್ನು ಮುಂದುವರೆಸುತ್ತಿದ್ದಾರೆ. ಅವರೆಲ್ಲರ ಮನಸ್ಥಿತಿಗಳಿಗೂ ಸ್ಪಂಧಿಸುತ್ತಾ ಕಲಿಸುವುದು ಸಂಜೆ ಕಾಲೇಜಿನ ಉದ್ದೇಶವಾಗಿದೆ. ಗುಣಾತ್ಮಕವಾದ ಶಿಕ್ಷಣವನ್ನು ಒದಗಿಸುವುದರ ಜೊತೆಗೆ ವಿದ್ಯಾರ್ಥಿಗಳಿಗೆ ನೈತಿಕ ಬೆಂಬಲ ಹಾಗೂ ಮಾನಸಿಕ ಸ್ಥೈರ್ಯವನ್ನು ತುಂಬುತ್ತಾ ಕಲಿಕೆಯಲ್ಲಿ ಭರವಸೆಯನ್ನು ಮೂಡಿಸುವ ಕೆಲಸವನ್ನು ಮಾಡುತ್ತಾ ಬರುತ್ತಿದೆ. ತರಗತಿಯ ಪ್ರವಚನದ ಜೊತೆಗೆ ಆನ್ ಲೈನ್ ನಲ್ಲಿಯೂ ಸಹ ತರಗತಿಗಳನ್ನು ನಡೆಸಿ ಪರೀಕ್ಷೆಗೆ ಸಿದ್ಧಪಡಿಸಲಾಗುತ್ತಿದೆ. ಈ ಕಾಲೇಜಿನಲ್ಲಿ ಪ್ರತಿಷ್ಠಿತ ರಾಜಕಾರಣಿಗಳು, ಐ.ಎ.ಎಸ್ ಮತ್ತು ಐ.ಪಿ.ಎಸ್, ಸಿ.ಎ ಅಧಿಕಾರಿಗಳು, ಚಲನಚಿತ್ರ ನಟ–ನಟಿಯರು ಹಾಗೂ ಚಿತ್ರ ನಿರ್ದೇಶಕರು, ಉಧ್ಯಮಿಗಳು, ಕಂಪನಿ ಮಾಲೀಕರುಗಳಾಗಿ ಹೊರ ಹೊಮ್ಮಿದ್ದಾರೆ.

ಕಾಲೇಜಿನಲ್ಲಿ ಸುಸಜ್ಜಿತವಾದ ಗ್ರಂಥಾಲಯವಿದ್ದು ಇಲ್ಲಿ ಎಲ್ಲಾ ವಿಷಯಗಳನ್ನೊಳಗೊಂಡಂತೆ ಸುಮಾರು 26000 ಪುಸ್ತಕಗಳಿವೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲೇ ಸಿಗದಿರುವಂತಹ ಬಹಳ ಮೌಲಿಕವಾದ ಪುಸ್ತಕಗಳ ಭಂಡಾರವಿರುವುದು ಮೆಚ್ಚುವ ಮಾತಾಗಿದೆ. ಅನುಭವಿ ಹಾಗೂ ಯುವ ಅಧ್ಯಾಪಕರುಗಳು ವಿದ್ಯಾರ್ಥಿ ಕೇಂದ್ರಿತ ನೆಲೆಯಲ್ಲಿ ಬೋಧನಾ ಕಾರ್ಯವನ್ನು ಕೈಗೆತ್ತಿಕೊಂಡು ನಡೆಸುತ್ತಿದ್ದಾರೆ.ಬೆಂಗಳೂರು ನಗರ ವಿಶ್ವ ವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ನಮ್ಮ ಕಾಲೇಜು ಎಲ್ಲದರ ಹಾಗೆ ಶೈಕ್ಷಣಿಕ




ನಿಯಮಗಳಡಿಯಲ್ಲಿ ನಡೆಯುತ್ತಿದೆ. ಪ್ರವೇಶ, ತರಗತಿಗಳು, ಪರೀಕ್ಷೆಗಳು, ಮೌಲ್ಯ ಮಾಪನ, ಫಲಿತಾಂಶಗಳು ಎಲ್ಲಾ ಒಂದೇ. ಉತ್ತಮ ಫಲಿತಾಂಶದ ಜೊತೆಗೆ ಕಾಲೇಜಿಗೆ ಉತ್ತಮ ಕೀರ್ತಿಯನ್ನೂ ತಂದುಕೊಡುವಲ್ಲಿ ಎಲ್ಲಾ ಅದ್ಯಾಪಕರೂ ಶ್ರಮಿಸುತ್ತಿದ್ದಾರೆ. ಕಛೇರಿಯ ಸಿಬ್ಬಂದಿಗಳೂ ಸಹ ವಿದ್ಯಾರ್ಥಿಗಳೊಡನೆ ಉತ್ತಮ ಸೇವಾ ಮನೋಭಾವನೆಯಿಂದ ಕೂಡಿದ್ದು, ವಿದ್ಯಾರ್ಥಿವೇತನದ ಜೊತೆಗೆ ವಿಶ್ವವಿದ್ಯಾನಿಲಯದ ಕೆಲಸ ಕಾರ್ಯಗಳನ್ನು ಸಕಾಲದಲ್ಲಿ ನಿರ್ವಹಿಸಿಕೊಡುವಲ್ಲಿ ಪ್ರಾಮಾಣಿಕವಾಗಿ ದುಡಿಯುತ್ತಿದ್ದಾರೆ.









2022 ರಲ್ಲಿ ಸಂಜೆ ಕಾಲೇಜು ಯು.ಜಿ.ಸಿ ಯ ನ್ಯಾಕ್ ಮಾನ್ಯತೆಗೆ ಒಳಪಟ್ಟಿದ್ದು ಬಿ.+ ಮಾನ್ಯತೆಯನ್ನು ಪಡೆದಿದೆ. ಬಹುಶಃ ಸಮಜೆ ಕಾಲೇಜು ಬಿ+ ಮಾನ್ಯತೆಯನ್ನು ಪಡೆದಿರುವುದು ಕರ್ನಾಟಕದಲ್ಲೇ ಮೊದಲು ಎಂಬ ಶ್ಲಾಘನೆಗೆ ಒಳಗಾಗಿದೆ. ಇದಕ್ಕಾಗಿಆಡಳಿತ ಮಂಡಳಿಯ ಮೆಚ್ಚುಗೆಗೆ ಪಾತ್ರವಾಗಿದೆ. ಈ ಸಂಜೆ ಕಾಲೇಜಿಗೆ ಶ್ರೀಯುತ ದೇವರಾಜು (ಹಾಫ್ ಕಾಮ್ಸ್) ಅವರು ಕಾಲೇಜು ಆಡಳಿತ ಮಂಡಳಿಯ ಅದ್ಯಕ್ಷರಾಗಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಡಾ. ವೈ ಪ್ರಕಾಶ್ ಅವರು ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ಕಂಕಣಬದ್ಧವಾಗಿ ಶ್ರಮಿಸುತ್ತಿರುವ ಈ ಕಾಲೇಜು ಬಡ ವಿದ್ಯಾರ್ಥಿಗಳ ಕಲಿಕೆಯ ಸ್ವರ್ಗವಾಗಿದೆ.

**– ಡಾ. ಅಮೃತಿರಾಜೇಶ್**
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕನ್ನಡ ವಿಭಾಗ
ವಿಶ್ವೇಶ್ವರಪುರ ಕಲೆ ಮತ್ತು ವಾಣಿಜ್ಯ ಪದವಿ ಸಂಜೆ ಕಾಲೇಜು

## ಸಂಜೆ ಕಲಿಕೆಯ ಕಲಿಗಳು

ಎಡವಿದವರು, ತಡವಾದವರು
ಮರೆತವರು, ನವೆದವರು
ಕನಸಿನವರು ಹಸನಾಗುವರು
ಈ ಸಂಜೆ ಕಾಲೇಜಿನಲ್ಲಿ
ಸಂಜೆ ಸವೆಯುವರಿಲ್ಲಿ
ಬೆಳಗ ಬೆಳಗಲೆಂದು
ದುಡಿದು ಓದಿ ದಣಿವವರು
ನಾಳೆ ಧಣಿಯಾಗುವರು
ಬಾಳನೋವಿಗೆ ಮದ್ದಾಗಿ
ಬಾಳನಾವೆಗೆ ದಿಕ್ಕಾಗಿ
ಇಲ್ಲಿ ಗೆಲುವಿನ ಗೋಲು
ಬಿದ್ದರೆ ಊರುಗೋಲು
ಸೋಲ ಸಣೆಸುವರು
ಅದನೆ ಮೆಟ್ಟಿಲಾಗಿಸುವರು
ಪುಸ್ತಕದ ಬದನೆಗೆ
ಅನುಭವದ ಎಸರಿಡುವರು
ಪರೀಕ್ಷೆಗಳ ದಾಟುವರು
ಜೀವನವ ಗೆಲ್ಲುವರು
ಶ್ರಮಯೋಗ ಬಲ್ಲವರು
ಸಂಜೆ ಕಲಿಕೆಯ ಕಲಿಗಳು

**– ಡಾ. ಗುರುದತ್ ಟಿ. ಎಸ್.**



# ವಿಶ್ವೇಶ್ವರಪುರ ಕಲಾ ಮತ್ತು ವಾಣಿಜ್ಯ ಹಗಲು ಕಾಲೇಜು

**K.R. Road, Bengaluru - 560 004**






**ಶ್ರೀ ದೇವರಾಜು (ಹಾಪ್‌ಕಾಮ್ಸ್)**
**ಅಧ್ಯಕ್ಷರು**
ಕಾಲೇಜು ಆಡಳಿತ ಮಂಡಳಿ
ವಿಶ್ವೇಶ್ವರಪುರ ಕಲೆ ಮತ್ತು ವಾಣಿಜ್ಯ ಹಗಲು ಕಾಲೇಜು



**ಡಾ। ಬಿ. ಶ್ರೀಲತ**
**ಪ್ರಾಂಶುಪಾಲರು**
ವಿಶ್ವೇಶ್ವರಪುರ ಕಲೆ ಮತ್ತು ವಾಣಿಜ್ಯ ಹಗಲು ಕಾಲೇಜು

ನಾಡಿನ ಗ್ರಾಮೀಣ ಕೃಷಿ ಆಧಾರಿತ ಸಮುದಾಯಗಳ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ಮಕ್ಕಳಿಗೆ ಶಿಕ್ಷಣವನ್ನು ಒದಗಿಸುವ ಉದ್ದೇಶದಿಂದ 1966 ರಲ್ಲಿ ರಾಜ್ಯ ಒಕ್ಕಲಿಗರ ಸಂಘ ಸ್ಥಾಪಿಸಿದ ಮೊದಲ ಶಿಕ್ಷಣ ಸಂಸ್ಥೆ. ನಗರದ ಹೃದಯ ಭಾಗದಲ್ಲಿರುವ ಇದು ಮೆಟ್ರೋ ಮತ್ತು ಸಿಟಿ ಬಸ್ ಸಾರಿಗೆ ಸೇವೆಯಿಂದ ಉತ್ತಮ ಸಂಪರ್ಕ ಹೊಂದಿದೆ.

ಕನ್ನಡ ನಾಡು ಕಂಡ ಶ್ರೇಷ್ಠ ಆಡಳಿತಗಾರರಲ್ಲಿ ಒಬ್ಬರೂ ಕೃಷ್ಣ ರಾಜಸಾಗರ ಬೃಂದಾವನದ ನಿರ್ಮಾತುಗಳೂ, ಪರಿಸರ ಪ್ರೇಮಿಗಳೂ, ದಕ್ಷತೆ ಮತ್ತು ಪ್ರಾಮಾಣಿಕತೆ ಹಾಗೂ ದೂರದರ್ಶಿತ್ವಕ್ಕೆ ಹೆಸರಾಗಿದ್ದ ದಿವಾನ್ ಮಿರ್ಜಾ ಇಸ್ಮಾಯಿಲ್ ರವರು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಬಸವನಗುಡಿ ನ್ಯಾಷನಲ್ ಕಾಲೇಜುಗಳ ಮಧ್ಯದಲ್ಲಿ ವಿಶ್ವೇಶ್ವರಪುರ ವಿಜ್ಞಾನ, ಕಲೆ ಹಾಗೂ ವಾಣಿಜ್ಯ ಕಾಲೇಜಿಗೆ ಅಡಿಗಲ್ಲು ಹಾಕಿ ಶಂಕುಸ್ಥಾಪನೆ ನೆರವೇರಿಸಿದ್ದು ರಾಜ್ಯ ಒಕ್ಕಲಿಗರ ಸಂಘದ ಇತಿಹಾಸದ ಪುಟಗಳ ಅವಿಸ್ಮರಣೀಯ ಘಟನೆ, ಬಹುಮುಖ್ಯವಾಗಿ ನಗರ ಪ್ರದೇಶಗಳನ್ನಷ್ಟೇ ಗಮನದಲ್ಲಿಟ್ಟುಕೊಳ್ಳದೆ, ಆಗಿನ ಸಮಯದ ಬೆಂಗಳೂರಿನ ಸುತ್ತಮುತ್ತಲ ಹಳ್ಳಿಯ ಬಡ, ಮಧ್ಯಮ ಹಾಗೂ ಸಾಮಾಜಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಹೆಚ್ಚಿನ ಗಮನ ನೀಡಿ 1966ರಲ್ಲಿ ಪ್ರಾರಂಭವಾದ ಕಾಲೇಜು, ದಿನಕಳೆದಂತೆ ನಗರ ಮತ್ತು ಹಳ್ಳಿಗಳ ಬಡ ಹಾಗೂ ಮಧ್ಯಮ ವರ್ಗದ ಜನರ ಪಾಲಿಗೆ ಕಾಮದೇನು ಕಲ್ಪವೃಕ್ಷವಾದುದು ಉತ್ಪ್ರೇಕ್ಷೆಯ ಮಾತೇನಲ್ಲ.

ಇಂದು ಸುಮಾರು ಒಂಭೈನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಅತ್ಯಂತ ಅನುಭವಿ ಮತ್ತು ಯುವ ಉತ್ಸಾಹಿ ಉಪನ್ಯಾಸಕರಗಳ ಸಂಗಮವಾಗಿರುವ ಕಾಲೇಜಿನಲ್ಲಿ ಶಿಕ್ಷಣದ ಜೊತೆಗೆ ಶೈಕ್ಷಣಿಕೇತರ ಚಟುವಟಿಕೆಗಳಾದ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಿಗೂ ಪ್ರೋತ್ಸಾಹ ನೀಡುತ್ತಾ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸುತ್ತಿದ್ದೇವೆ.





**ಶೈಕ್ಷಣಿಕ ಪಠ್ಯಕ್ರಮ**

ನಮ್ಮ ಕಾಲೇಜು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಶಾಶ್ವತ ಸಂಯೋಜನೆಗೆ ಒಳಪಟ್ಟಿದ್ದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಪಠ್ಯಕ್ರಮಕ್ಕನುಗುಣವಾಗಿ ರಾಷ್ಟ್ರೀಯ ಶಿಕ್ಷಣ ನೀತಿ–2020 ರಂತೆ ನಾಲ್ಕು ವರ್ಷಗಳ ಪದವಿ ಶಿಕ್ಷಣ ನೀಡುತ್ತಿದೆ.

1. ಬಿ.ಕಾಂ(ರೆಗ್ಯುಲರ್)
2. ಬಿ.ಎ (ಇ.ಪಿ) ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರ
   (ಹೆಚ್.ಕೆ) ಇತಿಹಾಸ ಮತ್ತು ಐಚ್ಛಿಕ ಕನ್ನಡ

**ನಮ್ಮ ಕಾಲೇಜಿನ ವೈಶಿಷ್ಟ್ಯಗಳು ಮತ್ತು ಸೌಲಭ್ಯಗಳು (ಮೂಲಸೌಕರ್ಯ)**

- **ಶೈಕ್ಷಣಿಕ ಪರಿಸರ:** ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣಕ್ಕಾಗಿ ಅತ್ಯುತ್ತಮವಾದ ಶೈಕ್ಷಣಿಕ ಪರಿಸರವನ್ನು ಕಾಲೇಜು ಹೊಂದಿದೆ. ಬೆಂಗಳೂರು ನಗರದ ಹೃದಯಭಾಗದಲ್ಲಿ ಕಾಲೇಜು ಇರುವುದರಿಂದ ವಿದ್ಯಾರ್ಥಿಗಳಿಗೆ ಉತ್ತಮವಾದ ಸಾರಿಗೆ ವ್ಯವಸ್ಥೆ (ಬಸ್ ಮತ್ತು ಮೆಟ್ರೊ) ಅನುಕೂಲವಿದೆ

- **ಗ್ರಂಥಾಲಯ:** ಅತ್ಯಂತ ಸುಸಜ್ಜಿತವಾದ ಗ್ರಂಥಾಲಯವನ್ನು ಕಾಲೇಜು ಹೊಂದಿದ್ದು ಸಾವಿರಾರು ಸಂಖ್ಯೆಯ ಪುಸ್ತಕಗಳು ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಅನುಕೂಲ ಮಾಡಿಕೊಡುತ್ತವೆ ಮತ್ತು ಪ್ರತ್ಯೇಕವಾಗಿ ವಿದ್ಯಾರ್ಥಿಗಳಿಗೆ ವಿಶಾಲವಾದ ವ್ಯಾಸಂಗದ ಕೊಠಡಿಯನ್ನು ಕಾಲೇಜು ಒಳಗೊಂಡಿದೆ.

- **ಕ್ರೀಡಾ ಚಟುವಟಿಕೆ:** ಕಾಲೇಜು ಅತ್ಯುತ್ತಮವಾದ ಕ್ರೀಡಾ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ನೀಡುತ್ತಿದೆ. ಕಾಲೇಜಿನಲ್ಲಿ ಉತ್ಸಾಹಿ ಹಾಗೂ ಅನುಭವಿ ದೈಹಿಕ ಶಿಕ್ಷಣ ನಿರ್ದೇಶಕರಿದ್ದು ಕಾಲೇಜು ಮಟ್ಟದಲ್ಲಿ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ವಿಶ್ವವಿದ್ಯಾನಿಲಯ ಮತ್ತು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಭಾಗವಹಿಸಲು ತರಭೇತಿ ನೀಡಲಾಗುತ್ತದೆ.

- **ಸಾಂಸ್ಕೃತಿಕ ಚಟುವಟಿಕೆಗಳು:** ಕಾಲೇಜು ಅತ್ಯುತ್ತಮವಾದ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರ. ಕಾಲೇಜು ಮಟ್ಟದಲ್ಲಿ ವಿದ್ಯಾರ್ಥಿಗಳ ಸಾಂಸ್ಕೃತಿಕ ಪ್ರತಿಭೆಗಳನ್ನು ಗುರುತಿಸಿ, ವಿಶ್ವವಿದ್ಯಾಲಯ ರಾಜ್ಯ ಮತ್ತು ರಾಷ್ಟ್ರಮಟ್ಟದ ಸ್ಪರ್ಧೆಗಳಿಗೆ ಸಿದ್ಧಗೊಳಿಸಲಾಗುತ್ತದೆ. ವಿಶೇಷವಾಗಿ ಜಾನಪದ ಕಲೆಗಳಾದ ಪೂಜಾ ಕುಣಿತ, ಡೊಳ್ಳು ಕುಣಿತ, ಪಟಕುಣಿತ,ತಮಟೆ,ಯಕ್ಷಗಾನ ಮುಂತಾದ ಕಲೆಗಳಿಗೆ ತರಬೇತು ನೀಡಲಾಗುತ್ತಿದೆ.



- **ವಾರ್ಷಿಕ ಸಂಚಿಕೆ:** ಪ್ರತಿ ವರ್ಷ ಕಲೇಜು "ಒಕ್ಕಲು" ಎಂಬ ವಾರ್ಷಿಕ ಸಂಚಿಕೆಯನ್ನು ಹೊರತರುತ್ತಿದ್ದು, ವಿದ್ಯಾಥಿಗಳಲ್ಲಿರುವ ಬರೆಯುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಅತ್ಯುತ್ತಮ ವೇದಿಕೆಯಾಗಿದೆ.

- **ರಾಷ್ಟ್ರೀಯ ಸೇವಾ ಯೋಜನ ಘಟಕ:** ಕಾಲೇಜು ರಾಷ್ಟ್ರೀಯ ಸೇವಾ ಯೋಜನ ಘಟಕವನ್ನು ಹೊಂದಿದೆ. ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ದಾರಿ ದೀಪದಂತಿರುವ ಕಾಲೇಜು ರಾಷ್ಟ್ರೀಯ ಯೋಜನ ಘಟಕದ ವತಿಯಿಂದ ಪ್ರತಿ ಶನಿವಾರ ಶ್ರಮದಾನ ಮತ್ತು ಪ್ರತಿ ವರ್ಷ ವಿಶೇಷ ಶಿಬಿರವನ್ನು ಹಮ್ಮಿಕೊಳ್ಳಲಾಗುತ್ತಿದೆ.

- **ವಿದ್ಯಾರ್ಥಿ ಸ್ನೇಹಿ ಪರಿಸರ ನಮ್ಮ ಕಾಲೇಜು**
  ಕಾಲೇಜು ವಿದ್ಯಾರ್ಥಿಸ್ನೇಹಿ/ಕಾಳಜಿಯ ಸುಂದರ ಪರಿಸರದಿಂದ ಕೂಡಿದೆ.
  1.ಆಂಟಿ ರ್‍ಯಾಗಿಂಗ್ ಘಟಕ
  2.ವಿದ್ಯಾರ್ಥಿ ಮತ್ತು ಅಧ್ಯಾಪಕರ ಸಮಿತಿ
  3.ಮಹಿಳಾ ಕ್ಲಬ್
  4.ಆಂಟಿ ಸೆಕ್ಸುಯಲ್ (ಕಿರಿಕುಳ) ಘಟಕ

– **ಪ್ರೊ. ಬೊಮ್ಮೇಗೌಡ**
ಕನ್ನಡ ವಿಭಾಗ, ವಿ.ವಿ.ಪುರ ಕಲೆ ಮತ್ತು ವಾಣಿಜ್ಯ ಕಾಲೇಜು










VISVESWARAPURA COLLEGE OF ARTS & COMMERCE
K.R. Road, Bengaluru - 560 004
ಕಾಲೇಜು ವಾರ್ಷಿಕೋತ್ಸವ







VOKKALIGARA PATHRIKE(KANNADA MONTHLY) KARKAN/2010/37125 JANUARY 2024



# ಕೆಂಪೇಗೌಡ ಆಸ್ಪತ್ರೆ

- ನುರಿತ ವೈದ್ಯರ ಸೇವೆ.
- ಇನ್‌ಶೂರೆನ್ಸ್ ಸೌಲಭ್ಯ.
- ಕೈಗೆಟುಕುವ ದರದಲ್ಲಿ ಚಿಕಿತ್ಸೆ.
- ದಿನದ 24 ಗಂಟೆಯು ಲಭ್ಯ.
- ವಿಶೇಷ ತುರ್ತು ಚಿಕಿತ್ಸಾ ಘಟಕ.

ರಾಜ್ಯ ಒಕ್ಕಲಿಗರ ಸಂಘದ ಅಧಿಕೃತ ಸಾಮಾಜಿಕ ಜಾಲತಾಣಗಳಿಗಾಗಿ
**QR Code ಸ್ಕ್ಯಾನ್ ಮಾಡಿ**




ವಿಳಾಸ: ಕಿಮ್ಸ್ ಆಸ್ಪತ್ರೆ, ವಿ.ವಿ. ಪುರ, ಕೆ.ಆರ್. ರಸ್ತೆ, ಬೆಂಗಳೂರು–56004
ದೂರವಾಣಿ ಸಂಖ್ಯೆ: 080–26620036, 26624870, 26672976, 26672998

VOKKALIGARA PATHRIKE – Printed, Published and Edited by D. Hanumantaiah on behalf of Rajya Vokkaligara Sangha. Printed at Vivek Colors, #4, 7th A Main, Magadi Road, Bangalore - 560023. Published at Rajya Vokkaligara Sangha, K.R. Road, V.V. Pura, Bangalore - 560 004.